ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ:ಪಪೂಶಿ/ಶೈಶಾ.04/ದಾ.ವೇ.ಶೈ.ಚ/2018-19 ದಿನಾಂಕ:15-05-2018

**ಸುತ್ತೋಲೆ**

ವಿಷಯ:- 2018-2019 ನೇ ಸಾಲಿಗ ಸಂಬಂಧಿಸಿದಂತೆ, ಪ್ರಥಮ ಪಿಯುಸಿ ದಾಖಲಾತಿ ವೇಳಾಪಟ್ಟಿ ಮತ್ತು ಶೈಕ್ಷಣಿಕ ಚಟುವಟಿಕೆಗಳ ಮಾಹಿತಿ.

ಉಲ್ಲೇಖ:- ಸರ್ಕಾರದ ಆಧೀನ ಕಾರ್ಯದರ್ಶಿ ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ), ರವರ ಪತ್ರ ಸಂಖ್ಯೆ: ಇಡಿ 87 ಎಸ್‌ಹೆಚ್‌ಹೆಚ್ 2018, ದಿನಾಂಕ 14-05-2018.

-------

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, **2018-19ನೇ** ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ತರಗತಿಗಳಿಗೆ ದಾಖಲಾತಿ ಹಾಗೂ ಶೈಕ್ಷಣಿಕ ವೇಳಾಪಟ್ಟಿಯನ್ನು ಕೆಳಗಿನಂತೆ ಸಿದ್ಧಪಡಿಸಲಾಗಿದೆ. ಅದರಂತೆ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರುಗಳು ಪರಿಪಾಲಿಸಲು ಸರ್ಕಾರವು ಆದೇಶಿಸಿದೆ.

| ಕ್ರ.ಸಂ | ವಿಷಯ | ವಿವರ |
|---|---|---|
| 1. | ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳು ಪ್ರಥಮ ಪಿಯುಸಿ ತರಗತಿಗಳ ದಾಖಲಾತಿಗೆ ಸಂಬಂಧಿಸಿದಂತೆ ಈ ಮಾಹಿತಿಗಳನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸುವ ಕುರಿತು | ರಾಜ್ಯದ SSLC ಪರೀಕ್ಷಾ ಫಲಿತಾಂಶ ಪ್ರಕಟವಾದ ದಿನದಂದು ಈ ಕೆಳಕಂಡ ವಿವರಗಳನ್ನು ಎಲ್ಲಾ ಕಾಲೇಜಿನವರು ತಮ್ಮ ಕಾಲೇಜಿನ ಸೂಚನಾ ಫಲಕದಲ್ಲಿ ಹಾಗೂ websiteನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.<br>• ಇಲಾಖೆಯಿಂದ ಅನುಮತಿ ಪಡೆದ ಸಂಯೋಜನೆವಾರು ಹಾಗೂ ರೋಸ್ಟರ್‌ವಾರು ಪ್ರವೇಶಗಳ ಮಾಹಿತಿ<br>• ದಾಖಲಾತಿ ಶುಲ್ಕಗಳ ವಿವರ<br>• ಬೋಧಕ ಹಾಗೂ ಬೋಧಕೇತರ ಸಿಬ್ಬಂಧಿಯ ಪೂರ್ಣ ವಿವರ. ಪ್ರಕಟಿಸಿದ ಪ್ರತಿಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಇ-ಮೇಲ್‌ಮುಖಾಂತರ **(academic.pue@gmail.com)** ಹಾಗೂ ಪ್ರತಿಯನ್ನು ಆಯಾ ಜಿಲ್ಲಾ ಉಪನಿರ್ದೇಶಕರಿಗೆ ಅದೇ ದಿನ ಕಡ್ಡಾಯವಾಗಿ ಸಲ್ಲಿಸುವುದು. |
| 2. | ಪ್ರವೇಶ ಅರ್ಜಿಗಳನ್ನು ವಿತರಿಸಲು ಕೊನೆಯ ದಿನಾಂಕ | ಎಸ್ ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶ ಪ್ರಕಟವಾದ 4ನೇ ಕಾರ್ಯನಿರತ ದಿನ 11-05-2018 |
| 3. | ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | ಪ್ರವೇಶ ಅರ್ಜಿಗಳನ್ನು ವಿತರಿಸಲು ನಿರ್ಧರಿಸಿದ ಕೊನೆಯ ದಿನಾಂಕದಿಂದ 2ನೇ ಕಾರ್ಯನಿರತ ದಿನ 15-05-2018 |
| 4. | ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳ ಪಟ್ಟಿ (ವರ್ಗವಾರು, ಮೆರಿಟ್ ಅನ್ವಯ ಇಳಿಕೆ ಕ್ರಮದಲ್ಲಿ) ಪ್ರಕಟಣೆ | ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸಿದ ಕೊನೆಯ ದಿನಾಂಕದಿಂದ ಕಾರ್ಯನಿರತ 2ನೇ ಕಾರ್ಯನಿರತ ದಿನ 17-05-2018 |
| 5. | ಆಯ್ಕೆಯಾದ ವಿದ್ಯಾರ್ಥಿಗಳ ಪ್ರಥಮ ಪಟ್ಟಿ ಪ್ರಕಟಣೆ | ಪ್ರಥಮ ಪಿಯುಸಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳ ಪಟ್ಟಿ ಪ್ರಕಟಿಸಲು ನಿಗದಿಪಡಿಸಿದ ದಿನಾಂಕದಿಂದ 2ನೇ ಕಾರ್ಯನಿರತ ದಿನ 19-05-2018 |
| 6. | ಪ್ರಥಮ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ | ಪ್ರಥಮ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ 23-05-2018 |
| 7. | ಪ್ರಥಮ ಪಿಯುಸಿ ತರಗತಿಗಳ ಪ್ರರಾಂಭ | ಪ್ರಥಮ ಪಿಯುಸಿ ತರಗತಿಗಳು ಪ್ರಾರಂಭ 24-05-2018 |
| 8. | ಆಯ್ಕೆಯಾದ ವಿದ್ಯಾರ್ಥಿಗಳ ದ್ವಿತೀಯ ಪಟ್ಟಿ ಪ್ರಕಟಣೆ | ಪ್ರಥಮ ಪಟ್ಟಿ ಪ್ರಕಟಪಡಿಸಿದ ದಿನಾಂಕದಿಂದ ಕಾರ್ಯನಿರತ 4ನೇ ದಿನ 24-05-2018 |
| 9. | ದ್ವಿತೀಯ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ ಪಾವತಿಸಲು ಕೊನೆಯ ದಿನಾಂಕ | ದ್ವಿತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ 28-05-2018 |

| | | |
|---|---|---|
| 10. | ಆಯ್ಕೆಯಾದ ವಿದ್ಯಾರ್ಥಿಗಳ ತೃತೀಯ ಪಟ್ಟಿ ಪ್ರಕಟಣೆ | ವಿದ್ಯಾರ್ಥಿಗಳ ದ್ವಿತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 3ನೇ ದಿನ 28-05-2018 |
| 11. | ತೃತೀಯ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶುಲ್ಕ. ಪಾವತಿಸಲು ಕೊನೆಯ ದಿನಾಂಕ | ತೃತೀಯ ಪಟ್ಟಿ ಪ್ರಕಟಿಸಿದ ದಿನಾಂಕದಿಂದ ಕಾರ್ಯನಿರತ 2ನೇ ದಿನ 30-05-2018 |
| 12. | ಶುಲ್ಕ ಕಟ್ಟಿ ದಾಖಲಾದ ವಿದ್ಯಾರ್ಥಿಗಳ ಪಟ್ಟಿ ಪ್ರಕಟಣೆ(ವರ್ಗವಾರು/ಸಂಯೋಜನೆವಾರು)ಸಂಯೋಜನೆ ವಾರು ಪ್ರವೇಶ ಪಡೆದ ಕೊನೆಯ ವಿದ್ಯಾರ್ಥಿಯ Cut off Point ಪ್ರಕಟಣೆ | ತೃತೀಯ ಪಟ್ಟಿ ಪ್ರಕಟವಾದ ದಿನಾಂಕದಿಂದ ಕಾರ್ಯನಿರತ 3ನೇ ದಿನ 02-06-2018 |
| 13. | ಪ್ರವೇಶಗಳು ಉಳಿದಿದ್ದಲ್ಲಿ – ಉಳಿದ ಪ್ರವೇಶಗಳಿಗೆ ಅಂತಿಮ ಪಟ್ಟಿ ಪ್ರಕಟಣೆ | ತೃತೀಯ ಪಟ್ಟಿ ಪ್ರಕಟವಾದ ದಿನಾಂಕದಿಂದ ಕಾರ್ಯನಿರತ 3ನೇ ದಿನ 02-06-2018 |

ಮೇಲ್ಕಂಡಂತೆ ದಾಖಲಾತಿ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಹಾಗೂ 2018-19ನೇ ಸಾಲಿನ ಇಲಾಖೆಯ ದಾಖಲಾತಿ ಮಾರ್ಗಸೂಚಿ ರಂತೆ ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರು ಕಡ್ಡಾಯವಾಗಿ ಪಾಲಿಸತಕ್ಕದು ಹಾಗೂ ಸರ್ಕಾರ ನಿಗಧಿಪಡಿಸಿರುವ ಶುಲ್ಕಗಳನ್ನು ಮಾತ್ರವೇ ವಿದ್ಯಾರ್ಥಿಗಳಿಂದ ಪಡೆದು ನಿಗಧಿತ ದಿನಾಂಕದೊಳಗೆ ಸರ್ಕಾರಕ್ಕೆ ಪಾವತಿಸತಕ್ಕದ್ದು ಎಂದು ಸೂಚಿಸಲಾಗಿದೆ.

15/5/18

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:-**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ– ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಗಮನಕ್ಕೆ ತರಲು ಸೂಚಿಸಿದೆ.
2. ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಮೂಲಕ.
3. ನಿರ್ದೇಶಕರ ಅಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ.
4. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
5. ಕಛೇರಿ ಪ್ರತಿ.